**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 81/2019</u>**

ದಿನಾಂಕಃ 23.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -7 ಅ.ಸಾ -10

| | | |
|---|---|---|
| ಹೆಸರು | ಃ | ಶ್ರೀ. ನವೀನ್ ಕುಮಾರ್ |
| ತಂದೆಯ ಹೆಸರು | ಃ | ನರಸಿಂಹಮ್ಮಮೂರ್ತಿ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಹೆಚ್ ಸಿ 206, ಸೆನ್ ಠಾಣೆ, ರಾಮನಗರ |
| ವಾಸಸ್ಥಳ | ಃ | ರಾಮನಗರ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2018 ರಲ್ಲಿ ತಾವರೆಕೆರೆ ಆರಕ್ಷಕ ಠಾಣೆಯಲ್ಲಿ ಪೇದೆ ಸಂಖ್ಯೆ 370 ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 19.08.2018 ರಂದು ಸಾಯಂಕಾಲ 7.00 ಗಂಟೆ ಸಮಯಕ್ಕೆ ನಾನು ಠಾಣೆಯಲ್ಲಿದ್ದಾಗ ನನ್ನನ್ನು ಮತ್ತು ದೋ.ಪ.ಸಾಕ್ಷಿ-5, 6, 8, 9 ಮತ್ತು 10 ರವರನ್ನು ದೋ.ಪ.ಸಾಕ್ಷಿ-1 ರವರ ಚೇಂಬರ್ ಗೆ ಕರೆಸಿ ಚಂದ್ರಪ್ಪ ಸರ್ಕಲ್ ಹತ್ತಿರದ ಕುರುಬರ ಪಾಳ್ಯ ಕ್ರಾಸ್ ಬಳಿ ಯಾರೋ 8 ರಿಂದ 10 ಜನ ಅಪರಿಚಿತರು ಬೈಕ್ ಗಳನ್ನು ನಿಲ್ಲಿಸಿಕೊಂಡು ರಸ್ತೆಯಲ್ಲಿ ಒಂಟಿಯಾಗಿ ಬರುವವರನ್ನು ಮತ್ತು ವಾಹನಗಳಲ್ಲಿ ಬರುವವರನ್ನು ಅಡ್ಡ ಗಟ್ಟಿ ಮಾರಕಾಸ್ತ್ರಗಳನ್ನು ತೋರಿಸಿ ಹೆದರಿಸಿ ಅವರ ಬಳಿ ಇರುವ ಹಣ ಇತ್ಯಾದಿ ವಸ್ತುಗಳನ್ನು ಕಿತ್ತುಕೊಳ್ಳೋಣ ಎಂದು ಮಾತಾನಾಡಿಕೊಳ್ಳುತ್ತಿದ್ದಾರೆ ಸದರಿ ಸ್ಥಳಕ್ಕೆ ಹೋಗಬೇಕೆಂದು

ಹೇಳಿದರು. ದೋ.ಪ.ಸಾಕ್ಷಿ-1 ರವರು ಪಂಚರಾಗಿ ದೋ.ಪ.ಸಾಕ್ಷಿ-2 ಮತ್ತು 3 ರವರನ್ನು ಕರೆಸಿಕೊಂಡರು.

ನಂತರ ದೋ.ಪ.ಸಾಕ್ಷಿ-1 ರವರು ಮೇಲೆ ಹೇಳಿದ ನಾವುಗಳನ್ನು, ಮತ್ತು ಪಂಚರನ್ನು ಕೆಎ-42-ಜಿ-107 ಸರ್ಕಾರಿ ಪೋಲಿಸ್ ಜೀಪನಲ್ಲಿ ಕರೆದುಕೊಂಡು ಸಂಜೆ 7.50 ರವರ ಸಮಯಕ್ಕೆ ಕುರುಬರ ಪಾಳ್ಯ ಕ್ರಾಸ್ ಬಳಿ ಬಂದರು. ನಂತರ ನಾವುಗಳು ಬೇಲಿ ಮರೆಯಲ್ಲಿ ನಿಂತು ನೋಡುತ್ತಿದ್ದು ಬೈಕ್ ಗಳನ್ನು ನಿಲ್ಲಿಸಿಕೊಂಡು 8 ಮತ್ತು 10 ಆಸಾಮಿಗಳು ಇದ್ದು ತಮ್ಮ ಬಾಸ್ ಆರೋಪಿ-1 ರವರಿಗೆ ಡಿಂಗ್ರಿ ನಾಗರಾಜು ಕೊಲೆ ನಡೆಸಲು ಹಣ ಬೇಕಾಗಿದೆ, ಯಾರನ್ನಾದರೂ ಬೆದರಿಸಿ ಹಣ ಕಿತ್ತುಕೊಂಡು ಕೇಸ್ ನಡೆಸಲು ಹೊಂದಿಸಿಕೊಳ್ಳಿ ಎಂದು ಮಾತಾನಾಡುತ್ತಿದ್ದರು. ದೋ.ಪ.ಸಾಕ್ಷಿ-1 ನಮಗೆ ಆರೋಪಿಗಳನ್ನು ಹಿಡಿಯಲು ಹೇಳಿದರು. ನಾವುಗಳು ಒಟ್ಟಾಗಿ ಅವರನ್ನು ಹಿಡಿಯಲು ಹೋಗಿದ್ದು 6 ಜನರನ್ನು ಹಿಡಿದಿದ್ದು 4 ಜನರು ಓಡಿ ಹೋಗಿರುತ್ತಾರೆ. ನಂತರ ಹಿಡಿದವರ ಹೆಸರು ಮತ್ತು ವಿಳಾಸ ಕೇಳಲಾಗಿ ಅವರುಗಳು ಆರೋಪಿ-2, 3, 4, 5, 6 ಮತ್ತು 7 ಆಗಿರುತ್ತಾರೆ. ಮುಂದುವರೆದು ವಿಚಾರಿಸಿದಾಗ ಅವರು ರಸ್ತೆಯಲ್ಲಿ ಒಂಟಿಯಾಗಿ ಬರುವ ಮತ್ತು ವಾಹನಗಳಲ್ಲಿ ಬರುವವರನ್ನು ಅಡ್ಡ ಗಟ್ಟಿ ಮಾರಕಾಸ್ತ್ರಗಳನ್ನು ತೋರಿಸಿ ಹೆದರಿಸಿ ಅವರ ಬಳಿ ಇರುವ ಹಣ ಇತ್ಯಾದಿ ವಸ್ತುಗಳನ್ನು ಕಿತ್ತುಕೊಂಡು ಅದರಿಂದ ಬರುವ ಹಣವನ್ನು ತಮ್ಮ ಬಾಸ್ ಆರೋಪಿ-1 ರವರಿಗೆ

ಡಿಂಗ್ರಿ ನಾಗರಾಜು ಕೊಲೆ ಪ್ರಕರಣ ನಡೆಸಲು ನೀಡಬೇಕು ಎಂದು ಹೊಂಚು ಹಾಕುತ್ತಿದ್ದುದ್ದಾಗಿ ಹೇಳಿದರು.

ಹಿಡಿದವರನ್ನು ಶೋಧನೆ ಮಾಡಿದಾಗ 2 ಲಾಂಗ್, ಒಂದು ದೊಣ್ಣೆ, ಒಂದು ಡ್ರಾಗರ್ ದೊರಕಿರುತ್ತದೆ. ಓಡಿ ಹೋದವರು ಆರೋಪಿ- 8 ರಿಂದ 11 ಎಂದು ತಿಳಿಯಿತು. ಸ್ಥಳದಲ್ಲಿ ಕೆಎ-02-ಜೆಆರ್-9277 ದ್ವಿ ಚಕ್ರ ವಾಹನ ಇತ್ತು. ಸಿಕ್ಕ ಆಯುಧಗಳನ್ನು ಮತ್ತು ದ್ವಿಚಕ್ರ ವಾಹನವನ್ನು ದೋ.ಪ.ಸಾಕ್ಷಿ-1 ರವರು ಪಂಚರ ಎದುರಿನಲ್ಲಿ ಪಂಚನಾಮೆ ಮೂಲಕ ವಶಪಡಿಸಿಕೊಂಡರು. ಸಾಕ್ಷಿ ನಿಪಿ-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು **ನಿಪಿ-1 ಜಿ** ಎಂದು ಗುರುತಿಲಾಯಿತು. ಪಂಚನಾಮೆಯನ್ನು ರಾತ್ರಿ 9.30 ರಿಂದ 10.30 ರವರೆಗೆ ಮಾಡಿರುತ್ತದೆ. ನಾವು ಹಿಡಿದ ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ಆಯುಧಗಳು ಮತ್ತು ದ್ವಿಚಕ್ರ ವಾಹನ ನೋಡಿದರೆ ಗುರುತಿಸಬಲ್ಲೆ. ನಿಪಿ-3 ಪೋಟೋಗಳಲ್ಲಿ ಕಾಣುತ್ತಿರುವುದು ವಶಪಡಿಸಿಕೊಂಡ ದ್ವಿಚಕ್ರ ವಾಹನ ಆಗಿರುತ್ತದೆ. ಮು.ಮಾ.1 ರಿಂದ 4 ವಶಪಡಿಸಿಕೊಂಡ ಆಯುಧಗಳು ಆಗಿರುತ್ತವೆ. ಮೇಲೆ ಹೇಳಿದಂತೆ ಆಗಿರುವುದರ ಕುರಿತು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ. ಟಿ.ಜಿ. ಆರೋಪಿಗಳ ಪರ ವಕೀಲರಿಂದ ಃ**

ಮಾಹಿತಿಯಲ್ಲಿ ಹೇಳಿದ ಸ್ಥಳ ಠಾಣೆಯಿಂದ ಸುಮಾರು 10 ರಿಂದ

15 ಕಿ ಮೀ ದೂರ ಇತ್ತು. ಸ್ಥಳಕ್ಕೆ ಹೋಗುವಷ್ಟರಲ್ಲಿ ಆಗಲೇ ಕತ್ತಲಾಗಿತ್ತು. ನಾವು ಹೋದ ಸ್ಥಳ ತೆರೆದ ಸ್ಥಳ ಆಗಿತ್ತು. ಕತ್ತಲೆಯಾಗಿದ್ದರಿಂದ ನಾವು ಹೋದ ಸ್ಥಳದಲ್ಲಿ ಇರುವವರಿಗೆ ವಾಹನದ ದೀಪದ ಬೆಳಕು ಕಾಣುತ್ತದೆ ಎನ್ನುವುದು ಸರಿ ಇದೆ. ನಾನು ಹಿಡಿದ ವ್ಯಕ್ತಿ ಯಾರು ಮತ್ತು ಆತನ ಬಳಿ ಯಾವ ಆಯುಧ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ದೋ.ಪ.ಸಾಕ್ಷಿ-1 ರವರು 10 ಜನ ಆ ಸ್ಥಳಕ್ಕೆ ಹೇಗೆ ಬಂದಿರುತ್ತಾರೆಂದು ವಿಚಾರಿಸಿರುವುದಿಲ್ಲ.

ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಯಾವ ಆಯುಧಗಳನ್ನು ಮತ್ತು ದ್ವಿ ಚಕ್ರ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ, ಇದನ್ನೆಲ್ಲಾ ಠಾಣೆಯಲ್ಲಿಯೇ ಕುಳಿತು ಸೃಷ್ಟಿ ಮಾಡಿರುತ್ತದೆ ಎನ್ನುವುದು ಸರಿ ಅಲ್ಲ. ಮು.ಮಾಲುಗಳ ಮೇಲೆ ನಮ್ಮ ಸಹಿ ಇಲ್ಲ ಮತ್ತು ಅವುಗಳನ್ನು ಪ್ಯಾಕ್ ಮಾಡಿಲ್ಲ ಎನ್ನುವುದು ಸರಿ ಇದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.